ವಿಷಯ :– ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ದುಸ್ಥಿತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 801 (1172)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯವರು ಅನೇಕ ಕಡೆ ನಡೆಸುತ್ತಿರುವ ವಿದ್ಯಾರ್ಥಿನಿಲಯಗಳ ದುಸ್ಥಿತಿ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ವಿದ್ಯಾರ್ಥಿನಿಲಯಗಳೆಷ್ಟು ?

ಇ) ಯಾವ ಯಾವ ದರ್ಜೆ ವಿದ್ಯಾರ್ಥಿನಿಲಯಗಳನ್ನು ಎಲ್ಲೆಲ್ಲಿ ನಡೆಸಲಾಗುತ್ತಿದೆ ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ಕೆಲವು ವಿದ್ಯಾರ್ಥಿನಿಲಯಗಳ ದುಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆ.

ಆ) 753.

ಇ) ಜಿಲ್ಲೆಗಳಲ್ಲಿ ನಡೆಸುತ್ತಿರುವ ಒಟ್ಟು ವಿದ್ಯಾರ್ಥಿನಿಲಯಗಳ ವಿವರ ಲಗತ್ತಿಸಲಾಗಿದೆ.

ANNEXURE

	Prematric	Postmatric
Bangalore (Urban)	23	5
Bangalore (Rural)	30	1
Kolar	44	10
Tumkur	33	20
Chitradurga	36	20
Shimoga	33	2
Mysore	50	6
Mandya	27	2
Hassan	31	2
Chikmagalur	23	3
Coorg	22	—
Dakshina Kannada	34	1
Belgaum	30	1
Bijapur	34	2
Dharwad	49	2
Uttara Kannada	22	—
Gulbarga	47	16
Bidar	25	1
Raichur	32	3
Bellary	35	1
Total :	660	98

ವಿಷಯ :– ಪರಿಶಿಷ್ಟ ಜಾತಿ ಜನಾಂಗದವರಿಗೆ ವಿಶೇಷ ಘಟಕ ಯೋಜನೆಯಡಿಯಲ್ಲಿ ನೀರಾವರಿ ಕೊಳವೆ ಭಾವಿಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 803 (1155)

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1986–87, 1987–88, 1988–89, 1989–90 ಹಾಗೂ 1990–91 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಜನಾಂಗದವರಿಗೆ ವೈಯಕ್ತಿಕ ನೀರಾವರಿ ಸೌಲಭ್ಯ ಒದಗಿಸಿಕೊಡಲು ವಿಶೇಷ ಘಟಕ ನೀರಾವರಿ ಕೊಳವೆ ಭಾವಿ ಯೋಜನೆಯಡಿಯಲ್ಲಿ ಜಿಲ್ಲಾವಾರು ನಿಗಧಿ ಪಡಿಸಿದ ಘಟಕಗಳ ಸಂಖ್ಯೆ ಎಷ್ಟು ? ಹಾಗೂ ಜಿಲ್ಲಾವಾರು ಸಾಧಿಸಿದ ಪ್ರಗತಿಯೆಷ್ಟು ?

ಆ) ಪರಿಶಿಷ್ಟ ಜಾತಿ, ಜನಾಂಗದವರಿಗೆ ವಿಶೇಷ ಘಟಕ ವೈಯಕ್ತಿಕ ನೀರಾವರಿ ಕೊಳವೆ ಭಾವಿ ಯೋಜನೆಯಡಿಯಲ್ಲಿ ನಿಗದಿ ಪಡಿಸಿದ ಗುರಿಯನ್ನು ಸಾಧಿಸುವಲ್ಲಿ ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಗುರಿ ಸಾಧಿಸಲು ಸರ್ಕಾರದ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ಜಿಲ್ಲೆಗಳಿಗೆ ನಿಗದಿ ಪಡಿಸಿದ ಗುರಿ 6824.

ಸಾಧಿಸಿದ ಪ್ರಗತಿ 6686.

(ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ಬಂದಿದೆ.

ಇ) ಈ ಜಿಲ್ಲೆಗಳಲ್ಲಿ ನಿಗದಿತ ಗುರಿ ಸಾಧನೆಗೆ ಹೊರ ರಾಜ್ಯಗಳಿಂದ ಕೊಳವೆ ಭಾವಿಗಳನ್ನು ಕೊರೆಯುವ ಕಂಪನಿಗಳನ್ನು ನೊಂದಾಯಿಸಿಕೊಳ್ಳಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮದ ಮೂಲಕ ಕ್ರಮ ಕೈಗೊಂಡಿದೆ.

ಅನುಬಂಧ

ಕ್ರ.ಸಂ.	ಜಿಲ್ಲೆ	1986–87ರಿಂದ1989–90 ನಿಗದಿತಗುರಿ	1990–91 ಸಾಧಿಸಿದಗುರಿ	ಶರಾ
1	ಬೆಂಗಳೂರು (ನಗರ)	251	196	ಅಕ್ಟೋಬರ್ 1990 ರಲ್ಲಿ ಬಳ್ಳಾರಿ ಜಿಲ್ಲೆ
2	ಬೆಂಗಳೂರು(ಗ್ರಾಮೀಣ)	389	515	ಹಾಗೂ ಕರ್ನಾಟಕ
3	ಚಿತ್ರದುರ್ಗ	455	745	ಪರಿಶಿಷ್ಟ ಜಾತಿ ಮತ್ತು
4	ಕೋಲಾರ	497	401	ಪರಿಶಿಷ್ಟ ವರ್ಗಗಳ ನಿಗಮಕ್ಕೆ
5	ತುಮಕೂರು	515	449	ಒಳಪಟ್ಟ 8 ಜಿಲ್ಲೆಗಳಿಗೆ
6	ಶಿವಮೊಗ್ಗ	403	322	115 ಲಕ್ಷ ರೂಪಾಯಿಗಳನ್ನು
7	ಮೈಸೂರು	547	853	ನೀರಾವರಿ ಭಾವಿಗಳಿಗಾಗಿ
8	ಮಂಡ್ಯ	115	305	ಸರ್ಕಾರ ಬಿಡುಗಡೆ ಮಾಡಿದ್ದು
9	ಹಾಸನ	325	385	ಕೆಲಸ ಪ್ರಗತಿಯಲ್ಲಿದೆ.
10	ಚಿಕ್ಕಮಂಗಳೂರು	309	142	
11	ಕೊಡಗು	41	—	
12	ದಕ್ಷಿಣ ಕನ್ನಡ	104	175	
13	ಬೆಳಗಾವ	409	422	
14	ಬಿಜಾಪುರ	469	494	
15	ಧಾರವಾಡ	388	108	
16	ಕಾರವಾರ	58	102	
17	ಗುಲ್ಬರ್ಗಾ	531	117	
18	ರಾಯಚೂರು	353	222	
19	ಬಳ್ಳಾರಿ	427	407	
20	ಬೀದರ್	243	326	
	ಒಟ್ಟು :	6824	6686	